ನಿಂತುಕೊಂಡ. ನೋಡಿದೊಡನೆ ಗುರುತು ಸಿಕ್ಕಿತು: ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ನಾನು ಅಧ್ಯಾಪಕನಾಗಿದ್ದಾಗ ನನ್ನ ವಿದ್ಯಾರ್ಥಿಯಾಗಿದ್ದ ಅಶೋಕ ದೇಶಪಾಂಡೆ.

ಏಳೆಂಟು ವರ್ಷಗಳ ಹಿಂದಿನ ಮಾತು. ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳಲ್ಲಿ ಎಲ್ಲೋ ಹತ್ತೆಂಟು ಜನರ ನೆನಪು ಮಾತ್ರ ಈಗ ಉಳಿದಿದೆ. ಎಲ್ಲೋ ಅಕಸ್ಮಾತ್ ಭೆಟ್ಟಿಯಾಗುತ್ತಾರೆ. ಗುರುತು ಹಿಡಿದು ಮಾತಾಡಿಸುತ್ತಾರೆ. ನನಗೆ ಎಷ್ಟೋ ಜನರ ಗುರುತೇ ಸಿಗುವುದಿಲ್ಲ. ಇನ್ನು ಕೆಲವು ಮುಖ ಪರಿಚಿತವೆಂದು ಅನಿಸಿದರೂ ಹೆಸರು ನೆನಪಿರುವುದಿಲ್ಲ. ಆದರೆ ದೇಶಪಾಂಡೆ ನಾನು ಕಾಲೇಜಿನಲ್ಲಿ ಆಡಿಸಿದ್ದ ಕೆಲವು ನಾಟಕಗಳಲ್ಲಿ ಮುಖ್ಯ ಪಾತ್ರಗಳನ್ನು ವಹಿಸಿದ್ದ. ಹಾಗೆ ಹೇಳಿಕೊಳ್ಳುವಂಥ ಒಳ್ಳೆಯ ನಟನೇನೂ ಅಲ್ಲವಾದರೂ, ನಾಟಕದ ಬಗ್ಗೆ ಅವನಿಗೆ ಬಹಳ ಉತ್ಸಾಹವಿತ್ತು. ನಾಟಕದಲ್ಲಿ ತನಗೆ ಪಾರ್ಟು ಕೊಡಬೇಕೆಂದು ನನ್ನ ಮನವೊಲಿಸಲು ಸದಾ ನನ್ನ ಹಿಂದೆಯೇ ತಿರುಗುತ್ತ, ಮಾತಿಗೊಮ್ಮೆ ನನ್ನನ್ನು ಹೊಗಳುತ್ತಾ, ನನ್ನ ನಿರ್ದೇಶನದಲ್ಲಿ ಕೆಲಸ ಮಾಡುವದೇ ಒಂದು ಭಾಗ್ಯವೆಂದು ಸಾರುತ್ತಾ, ನನ್ನ ಸಣ್ಣ ಪುಟ್ಟ ವೈಯಕ್ತಿಕ ಕೆಲಸಗಳನ್ನು ಉತ್ಸಾಹದಿಂದ ಮಾಡಿಕೊಡುತ್ತ ಒಂದು ಬಗೆಯ ವಿಶ್ವಾಸದಿಂದ ನಡೆದುಕೊಂಡಿದ್ದ. ಆದರೆ ಈ ವಿಶ್ವಾಸದ ಹಿಂದೆ ನಾಟಕದಲ್ಲಿ ಪಾರ್ಟು ಪಡೆಯಬೇಕೆಂಬ, ಅದರಲ್ಲೂ ಮುಖ್ಯ ಪಾತ್ರವನ್ನೇ ಗಿಟ್ಟಿಸಬೇಕೆಂಬ ಉದ್ದೇಶ ಸ್ಪಷ್ಟವಾಗಿ ಕಾಣುತ್ತಿದ್ದುದರಿಂದ ನನಗೆ ಅವನ ಬಗ್ಗೆ ಪ್ರತಿಯಾಗಿ ಅಂಥ ಪ್ರೀತಿ ವಿಶ್ವಾಸಗಳೇನೂ ಇರಲಿಲ್ಲ. ಅವನನ್ನು ಸಾಧ್ಯವಿದ್ದಷ್ಟು ದೂರವೇ ಇಡಲು ಪ್ರಯತ್ನಿಸುತ್ತಿದ್ದೆ. ಆದರೂ ಅವನು ತನ್ನ ಚಾಲೂಕಿನಿಂದ ಹೇಗೋ ನನ್ನ ಮನಸ್ಸನ್ನು ಮೆತ್ತಗೆ ಮಾಡಿ ತನ್ನ ಕೆಲಸ ಸಾಧಿಸಿಕೊಂಡುಬಿಡುತ್ತಿದ್ದ. ಆ ಕಾಲದಲ್ಲಿ ಅವನು ನನ್ನಲ್ಲಿ ಹುಟ್ಟಿಸಿದ್ದ ಇಂಥ ತೊಡಕಿನ ಭಾವನೆಗಳಿಂದಾಗಿ ಅವನ ಹೆಸರು ಪರಿಚಯ ನನಗಿನ್ನೂ ಮರೆತಿರಲಿಲ್ಲ. ನಾನು ಧಾರವಾಡವನ್ನು ಬಿಟ್ಟು ಕಲ್ಬುರ್ಗಿಗೆ ಬಂದು ಈಗ ಏಳು ವರ್ಷಗಳೇ ಆಗಿವೆ. ಆಗಾಗ ದೇಶಪಾಂಡೆ ಕಾಗದಗಳನ್ನು ಬರೆದಿದ್ದ. ಎಂ.ಎ. ಪರೀಕ್ಷೆಯಲ್ಲಿ ಮೂರನೆಯ ವರ್ಗದಲ್ಲಿ ಪಾಸಾಗಿ ತನ್ನ ಊರಿನ ಸಮೀಪದಲ್ಲಿಯ ಕಾಲೇಜೊಂದರಲ್ಲಿ ಈಗವನು ಅಧ್ಯಾಪಕನಾಗಿದ್ದ. ಆದರೂ ಆ ಕೆಲಸದಲ್ಲಿ ಅವನಿಗೆ ಸಮಾಧಾನವಿರಲಿಲ್ಲ. ಜೊತೆಗೆ ಮೂರನೆಯ ವರ್ಗದ ಡಿಗ್ರಿಯಿಂದಾಗಿ ನೌಕರಿಯೂ ಭದ್ರವಾಗಿರಲಿಲ್ಲ. ನನ್ನದೊಂದು ಕಥೆ ಸಿನಿಮಾ ಆದಮೇಲೆ, ಸಿನಿಮಾದಲ್ಲಿ ತನಗೊಂದು ಅವಕಾಶ ಕೊಡಿಸಬೇಕೆಂದು ನನ್ನನ್ನು ಒತ್ತಾಯಿಸಿ ಪದೇ ಪದೇ ಕಾಗದ ಬರೆಯುತ್ತಿದ್ದ. ನನಗೆ ಸಿನಿಮಾ ಜಗತ್ತಿನಲ್ಲಿ ಅವನಿಗೆ ಅವಕಾಶ ಕೊಡಿಸುವಷ್ಟು ಪ್ರಭಾವವೇನೂ ಇರಲಿಲ್ಲ. ಆದರೆ ಈ ಮಾತನ್ನು ನಂಬಲು ಅವನು ತಯಾರಿರಲಿಲ್ಲ. ಇಷ್ಟರ ಮೇಲೆ, ಈಗ ಎಂತೆಂಥವರೋ ಸಿನಿಮಾ ಮಾಡುತ್ತಿರುವಾಗ ನೀವೇ ಏಕೆ ಒಂದು ಸಿನಿಮಾ ತೆಗೆಯಬಾರದು, ನೀವು ಯಾರಿಗೆ ಯಾವುದರಲ್ಲಿ ಕಡಮೆ ಇದ್ದೀರಿ, ನೀವು ಸಿನಿಮಾ ತೆಗೆದರೆ ನಾನು ಪುಕ್ಕಟೆಯಾಗಿ ಪಾತ್ರವಹಿಸಲು ಸಿದ್ಧ— ಎಂದೆಲ್ಲಾ ನನಗೆ ದುಂಬಾಲು ಬಿದ್ದಿದ್ದ. ಹೀಗಾಗಿ ನಾನು ಅವನ ಪತ್ರಗಳಿಗೆ ಉತ್ತರವನ್ನೇ ಬರೆದಿರಲಿಲ್ಲ.

ಈಗ ಪ್ರತ್ಯಕ್ಷವಾಗಿ ಅವನ ಕೈಗೆ ಸಿಕ್ಕುಬಿಟ್ಟೆ. ಅವನು ಸುಲಭವಾಗಿ ನನ್ನನ್ನು ಬಿಟ್ಟಾನೆಂದು ಅನಿಸಲಿಲ್ಲ.

'ಏನ್ರಿ ಸರ್... ನಿಮ್ಮನ್ನ ಅಲ್ಲಿಂದs ಕೂಗಿಕೋತ ಬಂದೆ. ನೀವು ಹೊಳ್ಳೀ ನೋಡಲಿಲ್ಲ' ಎಂದ ದೇಶಪಾಂಡೆ.

'ನಾನು ರಸ್ತೇ ದಾಟೂ ಗಡಿಬಿಡಿಯೊಳಗ ಇದ್ದೆ. ನನ್ನ ಕೂಡ ಈ ಹುಡುಗಿ ಬ್ಯಾರೇ ಇದ್ಲು.